**Witness called and oath is administered on 3-1-2020**

**Further examination in chief by the advocate for plaintiff:-**

Today, I have filed my Affidavit evidence as my chief examination. The contents of the said Affidavit is true and correct to the best of my knowledge as they are drafted as per my instruction. It bears my signature.

**Further chief is deferred.**

**(Typed to my dictation in the open court)**

**ROI & AC.,**

**(Jaishankar)**
**XV ACC&S Judge,**
**Bengaluru.**

**Witness called and oath is administered on 27-2-2020**

**Further examination in chief by the advocate for plaintiff:-**

I have produced the following documents

Ex.P-1 : My voter ID card

Ex.P-2 : Original affidavit,
Dtd: 29-12-2006 executed by Def No.1.

Ex.P-3 : Copy of Objection Dtd: 9-2-2009
filed by H.Anantharaju to BBMP

Ex.P-4 : Copy of application Dtd: 1-10-2010
given to BBMP

Ex.P-5 : Original Grant order of Tahasildar
Dtd: 30-5-2015

Ex.P-6 : Original Certificate issued by BWSSB

Ex.P-7 : Original application given to BWSSB

Ex.P-8 : Original Provisional Demand note
issued by BWSSB

Ex.P-9 and 10 : Marriage Invitation Cards of
marriages of my children

Ex.P-11 : My ID card issued by Kuruhinasetty
Kendra Sangha

Ex.P-12 : My Adhar Card.

Further chief is deferred.

(Typed to my dictation in the open court)

ROI & AC.,

(Jaishankar)
XV ACC&S Judge,
Bengaluru.

O.S.5698/2017
PW-1

<u>ದಿನಾಂಕ 16.12.2021 ರಂದು ಸಾಕ್ಷಿ ಹಾಜರಿದ್ದು ಪ್ರಮಾಣಿಸಲಾಯಿತು.</u>

<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ :-</u>

ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರು ಇರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ದಾಖಲಿಸಿಕೊಳ್ಳಲಾಗಿದೆ.)

ಓ ಹೇ ಕೇ ಸರಿ ಇದೆ.

( ಎಸ್. ಆರ್. ದಿಂಡಲಕೊಪ್ಪ )
15 ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

<u>ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಆದ ಆದೇಶದ ಪ್ರಕಾರ ಪುನಃ ದಿನಾಂಕ 01.03.2023 ರಂದು ಹಾಜರಿದ್ದು ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ.ಎ. ಕೆ. ವಕೀಲರಿಂದ :-</u>

ನಾನು ಈಗ ಏನು ಯಾವುದೇ ಉದ್ಯೋಗ ಮಾಡುತ್ತಿಲ್ಲ. ಪ್ರತಿವಾದಿ 1 ಪುಟ್ಟಲಕ್ಷ್ಮಮ್ಮ ನನ್ನ ಮಾವನ 2 ನೇ ಹೆಂಡತಿ. ಸದರಿ ಪುಟ್ಟಲಕ್ಷ್ಮಮ್ಮ ನನ್ನ ಸ್ವಂತ ಅಕ್ಕ ಅಲ್ಲ. ಹನುಮಂತ ಶೆಟ್ಟಿ ರವರ ಮೊದಲನೆ ಹೆಂಡತಿ ಲಕ್ಷ್ಮಮ್ಮ ನನ್ನ ಅಕ್ಕ. ನಮ್ಮ ಅಕ್ಕ ಲಕ್ಷ್ಮಮ್ಮ ಮತ್ತು ಹನುಮಂತ ಶೆಟ್ಟಿ ರವರ 2 ನೆ ಹೆಂಡತಿ ಪುಟ್ಟಲಕ್ಷ್ಮಮ್ಮ ರವರಿಗೆ ಹಕ್ಕು ಪತ್ರ ಯಾವಾಗ ಮಂಜೂರಾಗಿದೆ ಎಂದರೆ ಸಾಕ್ಷಿ ನಮ್ಮ ಅಕ್ಕ ಲಕ್ಷ್ಮಮ್ಮ ರವರಿಗೆ ದಿನಾಂಕ 19.11.1991 ರಂದು ಮಂಜೂರು ಆಗಿರುತ್ತದೆ. 1 ನೇ ಪ್ರತಿವಾಗೆ ಯಾವಾಗ ಹಕ್ಕು ಪತ್ರ ಮಂಜೂರಾಗಿದೆ ನನಗೆ ಗೊತ್ತಿಲ್ಲ.

ನಮ್ಮ ಅಕ್ಕ ಲಕ್ಷ್ಮಮ್ಮ ದಿನಾಂಕ 13.04.1992 ರಲ್ಲಿ ತೀರಿಕೊಂಡಿರುತ್ತಾಳೆ. ನಮ್ಮ ಅಕ್ಕ ಲಕ್ಷ್ಮಮ್ಮ ದಿನಾಂಕ 14.04.1991 ರಂದು ನನ್ನ ಹೆಸರಿಗೆ ಮರಣ ಶಾಸನ ಮಾಡಿರುತ್ತಾರೆ. ಸದರಿ ಮರಣ ಶಾಸನದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

1 ನೇ ಪ್ರತಿವಾದಿ ಸಲ್ಲಿಸಿದ ಪ್ರಮಾಣ ಪತ್ರ ನಿಪಿ 2 ರಲ್ಲಿ ನಾನು 2006 ರ ವರೆಗೆ ಸ್ವಾಧೀನದಲ್ಲಿ ಇರುವ ಬಗ್ಗೆ ಹೇಳಿರುತ್ತಾರೆ ಎಂದರೆ ಅದು ಸುಳ್ಳು. ನಾನೇ 1991 ರಿಂದ ಸ್ವಾಧೀನದಲ್ಲಿ ಇರುತ್ತೇನೆ. ನಾನು ವಾಸ ಇರುವ ಜಾಗದ ಅಳತೆ 15 ಇಂಟು 20 ಅಡಿ ಇರುತ್ತದೆ. ನಾನು ಸದರಿ ಜಾಗೆಯಲ್ಲಿ ವಾಸ ಇಲ್ಲದೆ ಇರುವುದರಿಂದ ನನಗೆ ಅದರ ಅಳತೆ ಗೊತ್ತಿರುವುದಿಲ್ಲ ಎಂದರೆ ಸುಳ್ಳು. ಆ ಜಾಗದ ಅಳತೆ 15 ಇಂಟು 20 ಇರುವುದಿಲ್ಲ ಅದು ಬೇರೆ ಇರುತ್ತದೆ ಎಂದರೆ ಸುಳ್ಳು. ಅದರ ಅಳತೆ 10 ಇಂಟು 16 ಇರುತ್ತದೆ ಎಂದರೆ ಸಾಕ್ಷಿ 2 ಜಾಗಗಳನ್ನು ಸೇರಿಸಿ ಅದರ ಅಳತೆ 15 ಇಂಟು 20 ಇರುತ್ತದೆ. ನಾನು ದಾವಾ ಆಸ್ತಿಯಲ್ಲಿ ವಾಸ ಇಲ್ಲದೆ

ಇದ್ದರೂ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ಕೇಸು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ದಿನಾಂಕ 15.03.2011 ರಂದು ಯಾವುದೇ ಘಟನೆ ನಡೆಯದೆ ಇದ್ದರೂ ಪ್ರತಿವಾದಿಯರು ಬಂದು ನನ್ನ ಸ್ವಾಧೀನಕ್ಕೆ ತೊಂದರೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. ಅ ಸಮಯದಲ್ಲಿ ನಾನು ಪೊಲೀಸರಿಗೆ ದೂರು ಸಲ್ಲಿಸಿರಲಿಲ್ಲ.

**ಮರು ವಿಚಾರಣೆಃ- ವಾದಿ ವಕೀಲರ ಪರವಾಗಿ ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ. ಎನ್. ಕೆ ರವರ ಪರವಾಗಿ ಶ್ರೀ ಎಮ್. ಸಿ. ಆರ್ ವಕೀಲರಿಂದಃ-**

ನಮ್ಮ ಅಕ್ಕ ಲಕ್ಷ್ಮಮ್ಮ ನನ್ನ ಹೆಸರಿಗೆ ಮಾಡಿದ ಮರಣ ಶಾಸನ ದಿನಾಂಕ 14.04.1991 ಹಾಜರು ಪಡಿಸಿದ್ದು ಅದನ್ನು ನಿಪಿ 13 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ದಾಖಲಿಸಿಕೊಳ್ಳಲಾಗಿದೆ.)

ಓ ಹೇ ಕೇ ಸರಿ ಇದೆ.

( ಎಸ್. ಆರ್. ದಿಂಡಲಕೊಪ್ಪ )
15 ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

O.S.5698/2017
PW-1